<u>ದಿನಾಂಕ : 17.08.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ</u>

<u>ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ.ಎಸ್ ಹೆಚ್ ಎಸ್ ವಕೀಲರಿಂದ :</u>

30. 1986-87 ರ ಮಂಡಲ ಪಂಚಾಯತಿಯ ಚುನಾವಣೆಯನ್ನು ನಾನು ನೋಡಿರುವುದಿಲ್ಲ, ಆದರೆ ಆ ಬಗ್ಗೆ ನನ್ನ ತಂದೆ ಹೇಳಿರುವುದನ್ನು ಕೇಳಿರುತ್ತೇನೆ. ಆ ಬಗ್ಗೆ ನನ್ನ ತಂದೆ ಹಲವಾರು ಭಾರಿ ಹೇಳಿರುತ್ತಾರೆ. ಸದರಿ ಚುನಾವಣೆಯಲ್ಲಿ ನನ್ನ ತಂದೆ ಹಾಗೂ ಸತ್ಯಪ್ರಕಾಶರವರನ್ನು ಬೇರೆ ಬೇರೆ ರಾಜಕೀಯ ಪಕ್ಷಗಳಿಂದ ಸ್ಪರ್ದಿಸಲು ಅವಿರೋಧವಾಗಿ ಆಯ್ಕೆ ಮಾಡಿದ್ದ ವಿಚಾರವನ್ನು ನಾನು ಪೋಲಿಸರ ಮುಂದೆ ಕೊಟ್ಟ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಪೊಲಿಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

31. ನಮ್ಮ ತಂದೆಯ ಆಯ್ಕೆಯನ್ನು ಸದರಿ ಸತ್ಯಪ್ರಕಾಶ ಹಾಗೂ 9 ನೇ ಆರೋಪಿಯ ದೊಡಪ್ಪ ದೊಡ್ಡತಮ್ಮಯ್ಯ ವಿರೋದಿಸಿದ್ದರು, ಕೂಲಿ ಮಾಡುವವರನ್ನು ಹಾಗೂ ತಿಪ್ಪೆಯಲ್ಲಿ ಬೆಳೆದವರನ್ನು ನಮ್ಮ ಸರಿಸಮಾನವಾಗಿ ಬಿಂಬಿಸುತ್ತೀರಾ ಎಂದು ಹೇಳಿ ಆ ರೀತಿ ನಮ್ಮ ತಂದೆಯ ಆಯ್ಕೆಯನ್ನು ವಿರೋಧಿಸಿ ಚುನಾವಣೆ ನಡೆಯಲಿ ಎಂದು ಹೇಳಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು, ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1984 ರಲ್ಲಿ ಜನಿಸಿರುತ್ತೇನೆ.

32. ನಮ್ಮ ತಂದೆಯ ಗೆಲುವನ್ನು ಸಹಿಸದ ದೊಡ್ಡತಮ್ಮಯ್ಯ ಹಾಗೂ ಸತ್ಯಪ್ರಕಾಶ ರವರು ನಮ್ಮ ಊರಿನ ಅರಳಿಕಟ್ಟೆಯ ಬಳಿ ಕುಂಟರಾಜು ರವರ ತಂದೆ ನಡೆಸುತ್ತಿದ್ದ ಶೆಡ್ಡು ಹೋಟೆಲ್ನಲ್ಲಿ ದೊಣ್ಣೆಗಳನ್ನು ಸಂಗ್ರಹಿಸಿ ಕುಂಟರಾಜು ರವರ ದೊಡ್ಡಪ್ಪ ಕೆಂಪಣ್ಣ ರವರಿಗೆ ಮದ್ಯಪಾನ ಮಾಡಿಸಿ ನಮ್ಮ ತಂದೆಯ ವಿರುದ್ದ ಗಲಾಟೆ ಮಾಡಿಸಲು ಪ್ರಚೋದಿಸಿ ಕಳುಹಿಸಿದ್ದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು, ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

33. ಸದರಿ ಕೆಂಪಣ್ಣ ನಮ್ಮ ತಂದೆಯನ್ನು ಅವಾಚ್ಯ ಶಬ್ದಗಳಿಂದ ಬೈಯಲು ಪ್ರಾರಂಬಿಸಿದ್ದರು, ಇದನ್ನು ಪ್ರಶ್ನಿಸಿದ ನಮ್ಮ ತಂದೆಗೆ ಸತ್ಯಪ್ರಕಾಶ ಹಾಗೂ ದೊಡ್ಡತಮ್ಮಯ್ಯ ಕಡೆಯವರು ಸೇರಿ ನಮ್ಮ ತಂದೆಗೆ ಹೊಡೆಯಲು ಹೋಗಿದ್ದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಹೇಳಿರುತ್ತೇನೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

34. ಇದನ್ನು ಅಲ್ಲಿದ್ದ ನಮ್ಮ ಚಿಕ್ಕಪ್ಪ ದೇವರಾಜು ತಡೆದಿದ್ದರು, ಆಗ ಸತ್ಯಪ್ರಕಾಶ ಹಾಗೂ ದೊಡ್ಡತಮ್ಮಯ್ಯನ ಕಡೆಯವರು ಸೇರಿ ನನ್ನ ಚಿಕ್ಕಪ್ಪ ದೇವರಾಜು ರವರ ಎಡಗಾಲಿಗೆ ಹೊಡೆದು ಎಡಗಾಲಿನ ಮೂಳೆಯನ್ನು ಮುರಿದು ಹಾಕಿದ್ದ ಪ್ರಕರಣದಲ್ಲಿ ರಾಜಿ ಮಾಡಿಕೊಂಡಿದ್ದರು, ಸತ್ಯಪ್ರಕಾಶ ಹಾಗೂ ದೊಡ್ಡತಮ್ಮಯ್ಯನ ಕಡೆಯವರು ಸೇರಿ ನನ್ನ ಚಿಕ್ಕಪ್ಪ ದೇವರಾಜು ರವರ ಎಡಗಾಲಿಗೆ ಹೊಡೆದು ಎಡಗಾಲಿನ ಮೂಳೆಯನ್ನು ಮುರಿದು ಹಾಕಿರಲಿಲ್ಲ ಎಂದರೆ ಸರಿಯಲ್ಲ.

35. ಮೇಲ್ಕಂಡ ಘಟನೆ ನಡದ 2 ದಿನಗಳಿಗೆ ಮೇಲ್ಕಂಡ ಕೆಂಪಣ್ಣನ ಅಣ್ಣ ಚಿಕ್ಕಮರಿ ರವರ ಜಮೀನಿನಲ್ಲಿದ್ದ 11 ತೆಂಗಿನಮರಗಳನ್ನು ಸದರಿ ಕೆಂಪಣ್ಣ ಹಾಗೂ ಚಿಕ್ಕಮರಿ ಸೇರಿ ತಾವೇ ರಾತ್ರೋರಾತ್ರಿ ಕತ್ತರಿಸಿ ಮರುದಿನ ಬೆಳಗ್ಗೆ ಸದರಿ ತೆಂಗಿನ ಮರಗಳನ್ನು ನನ್ನ ತಂದೆ ಕತ್ತರಿಸಿರುತ್ತಾರೆ ಎಂದು ಸುಳ್ಳು ಅರೋಪ ಹೊರೆಸಿ ಪೊಲೀಸರಿಗೆ ದೂರು ನೀಡಿದ್ದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ, ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

36. ಸದರಿ ತೆಂಗಿನ ಮರಗಳನ್ನು ಕತ್ತರಿಸಿದ್ದು ಕೆಂಪಣ್ಣ ಹಾಗೂ ಚಿಕ್ಕಮರಿ ಎಂದು ಪೊಲೀಸರಿಗೆ ಗೊತ್ತಾಗಿದ್ದರಿಂದ ಪೋಲೀಸರು ನನ್ನ ತಂದೆಯ ವಿರುದ್ದ ಪ್ರಕರಣ ದಾಖಲು ಮಾಡಲಿಲ್ಲ ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

37. ನನ್ನ ತಂದೆ ನಂತರ ರಾಜಕೀಯದಲ್ಲಿ ಹಾಗೂ ಕೆಲಸದಲ್ಲಿ ಆಸಕ್ತಿ ಕಳೆದುಕೊಂಡು ನಮ್ಮ ತೋಟದಲ್ಲಿ ಮನೆ ಮಾಡಿಕೊಂಡು ವ್ಯವಸಾಯ ಹಾಗೂ ವ್ಯಾಪಾರ ನೋಡಿಕೊಂಡು ಜೀವನ ನಡೆಸಲು ಪ್ರಾರಂಬಿಸಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

38. ನಮ್ಮ ತಂದೆ ನಮಗೂ ಸಹ ಊರಿನ ಯಾವುದೇ ವಿಚಾರಕ್ಕೂ ಹೋಗಬೇಡಿ ಹಾಗೂ ಮುಂದಾಳತ್ವ ವಹಿಸಬೇಡಿ ಎಂದು ಸಲಹೆ ಕೊಡುತ್ತಿದ್ದರು, ಆದುದರಿಂದ ನಾವು ಹೆಚ್ಚಾಗಿ ನಮ್ಮ ಊರಿಗೆ ಹೋಗುತ್ತಿರಲಿಲ್ಲ, ನಾನು ವಿದ್ಯಾಭ್ಯಾಸ ಮುಗಿಸಿ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿಕೊಂಡೆ, ನನ್ನ ತಮ್ಮ ಎಳನೀರು ವ್ಯಾಪಾರ ಮಾಡಲು ಪ್ರಾರಂಬಿಸಿದನು, ನಮ್ಮ ಚಿಕ್ಕಪ್ಪನ ಮಕ್ಕಳು ಸಹ ನನ್ನ ಹಾಗೂ ನನ್ನ ತಮ್ಮನ ಎಳನೀರು ವ್ಯಾಪಾರದಲ್ಲಿ ಸಹಾಯ ಮಾಡಿಕೊಂಡು ಮುಂದುವರೆಯಲು ಪ್ರಾರಂಬಿಸಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

39. 2015 ರ ಗ್ರಾಮ ಪಂಚಾಯತಿ ಚುನಾವಣೆಗೂ ಹಿಂದಿನ ಚುನಾವಣೆಯಲ್ಲಿ ನನ್ನ ಸೋದರ ಮಾವ ಪುಟ್ಟಸ್ವಾಮಿ 4 ನೇ ಆರೋಪಿ ಕೆಂಗಲ್ ಗೌಡ ವಿರುದ್ದ ಸೋತಿದ್ದರು, ಸದರಿ ಚುನಾವೆಣಯಲ್ಲಿ ಸಹಾಯ ಮಾಡಿ ಎಂದು ನನ್ನ ಸೋದರ ಮಾವ ಕರೆದಿದ್ದರೂ ಸಹ ನಾವು ನಮ್ಮ ತಂದಗೆ ಹೆದರಿಕೊಂಡು ಸದರಿ ಚುನಾವಣೆಯ ಚಟುವಟಿಕೆಗಳಲ್ಲಿ ಭಾಗವಹಿಸಿರಲಿಲ್ಲ ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

40. ನಾವು ಯಾವುದಾದರೂ ಸಮಾರಂಭಗಳಿಗೆ ಹೋದಾಗ ನಮ್ಮ ಸೋದರ ಮಾವ ನಮ್ಮನ್ನು ತೋರಿಸಿ ಇವರು ಸಹಾಯ ಮಾಡಲಿಲ್ಲವಾದ್ದರಿಂದ ನಾನು ಚುನಾವಣೆಯಲ್ಲಿ ಸೋತೆ ಎಂದು ನಮ್ಮನ್ನ

ಹಂಗಿಸಿ ಮಾತನಾಡುತ್ತಿದ್ದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

41. 2015 ರ ಗ್ರಾಮ ಪಂಚಾಯತಿ ಚುನಾವಣೆಗೂ ಮೊದಲು ನಡೆದ ಪೂರ್ವ ಭಾವಿ ಸಭೆಯಲ್ಲಿ ನಾನು ಭಾಗವಹಿಸಿರಲಿಲ್ಲ. ಸದರಿ ಸಭೆಯ ಕಾಲದಲ್ಲಿ ನಮ್ಮ ಸೋದರ ಮಾವ ನಮ್ಮನ್ನು ಕುರಿತು ಈಗಲಾದರೂ ಬಂದು ನಮಗೆ ಸಹಾಯ ಮಾಡಿ ಎಂದು ನಮ್ಮನ್ನು ಕರೆದರು, ನಮ್ಮ ತಂದೆ ಬೇಡ ಅಂದರೂ ಸಹ ನಾನು ಮತ್ತು ನನ್ನ ತಮ್ಮ ಸೇರಿ ಎಷ್ಟು ದಿನಗಳ ಕಾಲ ಗ್ರಾಮದಿಂದ ಹೊರಗೆ ಇರುವುದು, ಕಾನೂನು ನಮ್ಮ ಪರವಾಗಿದೆ ಎಂದು ಹೇಳಿ ಪ್ರೋತ್ಸಾಹಿಸಿ ಕಳುಹಿಸಿದೆವು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

42. ಸಭೆಯಲ್ಲಿ ನನ್ನ ತಂದೆ ನಾವು ಕಳೆದ ಭಾರಿ ಸೋತಿರುವುದರಿಂದ ಈ ಭಾರಿ ಒಂದು ಸೀಟು ನಮಗೆ ಕೊಟ್ಟು 3 ಸೀಟನ್ನು ನೀವೇ ಇಟ್ಟುಕೊಳ್ಳಿ ಎಂದು ಹೇಳಿದರು, ಅದಕ್ಕೆ ಆರೋಪಿಗಳಾದ ಮಹೇಂದ್ರ, ಕೆಂಗಲ್ ಗೌಡ ಹಾಗೂ ಪ್ರಕಾಶ ವಿರೋಧ ವ್ಯಕ್ತ ಪಡಿಸಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೇನೆ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಾದ ಮಹೇಂದ್ರ, ಕೆಂಗಲ್ ಗೌಡ ಹಾಗೂ ಪ್ರಕಾಶ ನಾನು ಹೇಳಿದಂತೆ ಯಾವುದೇ ವಿರೋಧ ವ್ಯಕ್ತ ಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಭೆಯಲ್ಲಿ ನಡೆದ ವಿವರಗಳನ್ನು ಸಭೆಯಾದ ನಂತರ ಸಭೆಯ ದಿನವೇ ನನ್ನ ತಮ್ಮ ನನಗೆ ಫೋನ್ ಮಾಡಿ ಹೇಳಿದ್ದನು. ಆ ರೀತಿ ನನ್ನ ತಮ್ಮ ನನಗೆ ಫೋನ್ ಮಾಡಿ ಸದರಿ ಸಭೆಯ ವಿಚಾರಗಳನ್ನು ತಿಳಿಸಿರಲಿಲ್ಲವಾದರಾ ಸಹ ಅವುಗಳನ್ನು ನಾನು ಸೃಷ್ಟಿಸಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

43. ಸದರಿ ಆರೋಪಿಗಳು ಒಬ್ಬ ಮಹಿಳೆಗೆ ಬೇಕಾದರೆ ಸೀಟು ಕೊಡುತ್ತೇವೆ ಆದರೆ ಪುಟ್ಟಸ್ವಾಮಿಗೆ ನಾವು ಸೀಟು ಕೊಡುವುದಿಲ್ಲ ಎಂದು ಹೇಳಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ

ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

44. ಸ್ಮಶಾನ ಮತ್ತು ಕೆರೆಯನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಹಾಗೂ ಕಟ್ಟಿಸಿದ ಶಾಲೆ 6 ತಿಂಗಳಿಗೆ ಬಿದ್ದು ಹೋಗಿರುವ ಬಗ್ಗೆ ಯಾವುದಾದರೂ ದೂರು ದಾಖಲಾಗಿದೆಯಾ ಎಂದರೆ ಸಾಕ್ಷಿ ಸ್ಮಶಾನ ಮತ್ತು ಕೆರೆಯ ಒತ್ತುವರಿಯ ಬಗ್ಗೆ ದೂರು ದಾಖಲಾಗಿದೆ ಎಂದು ನುಡಿದಿದ್ದಾರೆ. ಆ ರೀತಿ ಯಾವುದೇ ದೂರು ದಾಖಲಾಗಿಲ್ಲವಾದರೂ ಸಹ ನಾನು ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

45. ಬೋವಿ ಜನಾಂಗಕ್ಕೆ ನೀಡಿದ ಸೈಟಿನ ಹಕ್ಕು ಪತ್ರಗಳನ್ನು ನಿಮಗೆ ಬೇಕಾದವರಿಗೆ ಮಾಡಿಕೊಳ್ಳುತ್ತೀದ್ದಿರಾ, ಅಕ್ರಮ ಗಣಿಗಾರಿಕೆ ಮಾಡುತ್ತಿದ್ದೀರಾ, ಪಂಚಾಯತಿ ನಿಧಿಯಲ್ಲಿ ಬೋರ್ ವೆಲ್ ಹಾಕಿಸಿ ಅದನ್ನು ಸ್ವಂತಕ್ಕೆ ಉಪಯೋಗಿಸಿಕೊಳುತ್ತಿದ್ದೀರಾ ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

46. ಇನ್ನು 3-4 ಸೀಟುಗಳನ್ನು ಇಟ್ಟುಕೊಂಡು ಇನ್ನು ಏನು ಮಾಡಬೇಕೆಂದಿದ್ದೀರಾ ಎಂದು ಪ್ರಶ್ನಿಸಿದರು, ಇದರಿಂದ ಕೋಪಗೊಂಡ ಆರೋಪಿ ಪ್ರಕಾಶ ಬೋರಲಿಂಗನಿಗೆ ಸಭೆಯಲ್ಲಿ ಹೊಡೆದರು, ಇದನ್ನು ತಡೆಯಲು ಜಗದೀಶ, ಪುಟ್ಟಸ್ವಾಮಿ ಹಾಗೂ ನನ್ನ ತಂದೆ ಹೋದರು, ಆಗ ಮಹೇಂದ್ರ ನಮ್ಮ ತಂದೆ ಹಾಗೂ ಇತರರನ್ನು ಕುರಿತು ತಾಕತ್ತು ಇದ್ದರೆ ಒಂದು ಸೀಟು ಗೆದ್ದು ತೋರಿಸಿ ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲಿಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಸಭೆಯಲ್ಲಿ ಪ್ರಕಾಶ ಬೋರಲಿಂಗನಿಗೆ

ಹೊಡೆದಿಲ್ಲ ಎಂದರೆ ಸರಿಯಲ್ಲ. ಆಗ ಮಹೇಂದ್ರ ನಮ್ಮ ತಂದೆ ಹಾಗೂ ಇತರರನ್ನು ಕುರಿತು ತಾಕತ್ತು ಇದ್ದರೆ ಒಂದು ಸೀಟು ಗೆದ್ದು ತೋರಿಸಿ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ.

47. ಪಂಚಾಯತಿಯ ಅಭಿವೃದ್ದಿ ಕಾರ್ಯದ ಬಗ್ಗೆ ಹಾಕಿದ ಫಲಕಗಳನ್ನು ಅರೋಪಿಗಳು ಕಿತ್ತು ಹಾಕಲು ಪ್ರಾರಂಬಿಸಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯತಿಯ ಅಭಿವೃದ್ದಿ ಕಾರ್ಯದ ಬಗ್ಗೆ ಹಾಕಿದ ಫಲಕಗಳನ್ನು ಅರೋಪಿಗಳು ಕಿತ್ತು ಹಾಕಿದ ಬಗ್ಗೆ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳು ಆರೋಪಿಗಳ ವಿರುದ್ದ ಏನಾದರೂ ಕ್ರಮ ಕೈಗೊಂಡರೋ, ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗಳು ನಾನು ಹೇಳಿದಂತೆ ಯಾವುದೇ ಫಲಕಗಳನ್ನು ಕಿತ್ತು ಹಾಕಿಲ್ಲ ಎಂದರೆ ಸರಿಯಲ್ಲ.

48. ಅರೋಪಿ ಕುಂಟರಾಜುವಿಗೆ ಮದ್ಯಪಾನ ಮಾಡಿಸಿ ಕುಡಿಯುವ ನೀರಿನ ಟ್ಯಾಂಕಿಗೆ ಫೆನಾಯಿಲ್ ಅನ್ನು ಅರೋಪಿಗಳು ಹಾಕಿಸಿದರು ಹಾಗೂ ಕುಡಿಯುವ ನೀರಿನ ಬೋರ್ ವೆಲ್ ಗೆ ಅರೋಪಿಗಳು ಸೀಮೆಎಣ್ಣೆ ಹಾಕಿಸಿದ ಘಟನೆಯನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ, ನನ್ನ ತಮ್ಮ ನನಗೆ ಸದರಿ ವಿಚಾರವನ್ನು ತಿಳಿಸಿದರು ಎಂದು ನುಡಿದಿದ್ದಾರೆ. ಸದರಿ ಘಟನೆ ನಡೆದ ದಿನವೇ ನನ್ನ ತಮ್ಮ ನನಗೆ ಫೋನ್ ನಲ್ಲಿ ವಿಷಯ ತಿಳಿಸಿದ್ದು, ಘಟನೆ ನಡೆದ ದಿನಾಂಕವನ್ನು ಹೇಳಲಾರೆ. ಅರೋಪಿ ಕುಂಟರಾಜುವಿಗೆ ಮದ್ಯಪಾನ ಮಾಡಿಸಿ ಕುಡಿಯುವ ನೀರಿನ ಟ್ಯಾಂಕಿಗೆ ಫೆನಾಯಿಲ್ ಅನ್ನು ಅರೋಪಿಗಳು ಹಾಕಿಸಿದರು ಹಾಗೂ ಕುಡಿಯುವ ನೀರಿನ ಬೋರ್ ವೆಲ್ ಗೆ ಅರೋಪಿಗಳು ಸೀಮೆಎಣ್ಣೆ ಹಾಕಿಸಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು, ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

49. ನೀರಿನ ಗೇಟ್ ವಾಲ್ ಗೆ ಅರೋಪಿ ಕುಂಟರಾಜು ಕಲ್ಲು ಎತ್ತಿ ಹಾಕಿ ಹಾಳು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿ ಕುಂಟರಾಜು ವಾಟರ್ ಮನ್ ಗೆ ಬಾಯಿಗೆ

ಬಂದಂತೆ ಬೈಯುತ್ತಿದ್ದರು ಹಾಗೂ ಹೊಡೆಯುತ್ತಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

50. ವಾಟರ್ ಮನ್ ತಮ್ಮ ವಿರುದ್ದ ದೂರು ಕೊಟ್ಟನು ಎಂಬ ಕಾರಣಕ್ಕಾಗಿ ದಿಃ 25.12.2016 ರಂದು ನನ್ನ ತಮ್ಮ ಪ್ರತಿನಿತ್ಯ ಆರೋಪಿ ಕುಂಟರಾಜು ರವರ ಮನೆಯ ಬಳಿ ಇದ್ದ ಹುಚ್ಚೇಗೌಡರ ಮನೆಯಿಂದ ಹಾಲು ತರಲು ಹೋಗಿದ್ದಾಗ ಆರೋಪಿ ಕುಂಟರಾಜು ಕಡೆಯವರೆಲ್ಲಾ ಸೇರಿ ನನ್ನ ತಮ್ಮ ಪ್ರಸನ್ನನಿಗೆ ಹೊಡೆದಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಪೊಲಿಸರ ಮುಂದೆ ಹೇಳಿಕೆಯನ್ನು ಸದರಿ ವಿಚಾರವನ್ನು ನಾನು ಹೇಳಿರುತ್ತೇನೆ. ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಸದರಿ ವಿಚಾರವನ್ನು ಹೇಳಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

51. ನಾನು ನಮ್ಮ ಗ್ರಾಮಕ್ಕೆ ಬಂದು ಪ್ರಸನ್ನನಿಗೆ ಫೋನ್ ಮಾಡಿ ಕೇಳಿದೆನು, ಆಗ ಆಸ್ಪತ್ರೆಯಲ್ಲಿದ್ದ ಪ್ರಸನ್ನ ನೀನು ನನ್ನನ್ನು ನೋಡಲು ಮಂಡ್ಯಕ್ಕೆ ಬರಬೇಡ, ತೋಟದಲ್ಲಿ ಅಪ್ಪ ಒಬ್ಬರೇ ಇರುತ್ತಾರೆ, ನಾನು ಸಂಜೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಬರುವವರೆಗೂ ನೀನು ತೋಟದ ಮನೆಯಲ್ಲಿ ತಂದೆಯೊಂದಿಗೆ ಇರು ಎಂದು ಹೇಳಿದನು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

52. ನಾನು ತೋಟದ ಮನೆಗೆ ಹೋಗಿ ನೋಡಿದಾಗ ನನ್ನ ತಂದೆ ತೋಟದ ಮನೆಯಲ್ಲಿ ಇರಲಿಲ್ಲ, ತೋಟದ ಮನೆಯಲ್ಲಿ ನನ್ನ ಚಿಕ್ಕಪ್ಪನ ಮಕ್ಕಳಾದ ಶಿವರಾಜು ಹಾಗೂ ಸ್ವಾಮಿ ಮನೆಯಲ್ಲಿ ಇದ್ದವರನ್ನು ವಿಚಾರಿಸಿದಾಗ ನನ್ನ ತಂದೆ ಮದ್ದೂರಿಗೆ ಹೋಗಿರುತ್ತಾರೆ ಎಂದು ಗೊತ್ತಾಯಿತು ಎಂದು ಅವರುಗಳು ನನಗೆ ಹೇಳಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

53. ನಮ್ಮ ಚಿಕ್ಕಪ್ಪ ಶಿವರಾಮು ಜೊತಗೆ ನಾನು ಫೋನ್ನಲ್ಲಿ ಮಾತಾಡಿದಾಗ ತಾನು ಮದ್ದೂರು ಪೊಲೀಸ್ ಠಾಣೆಯ ಬಳಿ ಇದ್ದೇನೆಂದು ಹಾಗೂ ಇಲ್ಲಿ ಆರೋಪಿಗಳಾದ ಮಹೇಂದ್ರ, ಕೆಂಗಲ್ ಗೌಡ, ಪ್ರಕಾಶ, ಮಹದೇವ, ಪುಟ್ಟರಾಮ, ಹೊನ್ನಯ್ಯ ಹಾಗೂ ಈ ಪ್ರಕರಣದ ಇತರೆ ಆರೋಪಿಗಳು ಇದ್ದಾರೆ ಹಾಗೂ ಪುಟ್ಟಲಿಂಗಮ್ಮನನ್ನು ಕರೆದುಕೊಂಡು ಬಂದು ಆಕೆಯ ಕಡೆಯಿಂದ ಪ್ರಸನ್ನ, ನನ್ನ ಚಿಕ್ಕಪ್ಪಂದಿರು ಹಾಗೂ ಚುನಾವಣೆಯಲ್ಲಿ ಗೆದ್ದವರ ವಿರುದ್ದ ಸುಳ್ಳು ದೂರು ಕೊಡಿಸುತ್ತಿದ್ದಾರೆ ಎಂದು ಹೇಳಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

54. ಅಲ್ಲಿ ಆರೋಪಿಗಳು ಇದ್ದರು, ನಾನು ಇನ್ಸ ಪೆಕ್ಟರ್ ಬಳಿ ಹೋಗಿ ಆರೋಪಿಗಳೇ ನನ್ನ ತಮ್ಮನಿಗೆ ಈ ದಿನ ಬೆಳಿಗ್ಗೆ ಹೊಡೆದಿದ್ದು, ಈಗ ನಮ್ಮ ವಿರುದ್ದವೇ ಕೊಡಿಸುತ್ತಿರುವ ಸುಳ್ಳು ದೂರನ್ನು ತೆಗೆದುಕೊಳ್ಳುತ್ತಿದ್ದೀರಾ ಎಂದು ನಾನು ಇನ್ಸ ಪೆಕ್ಟರ್ ರವರನ್ನು ಕೇಳಿದೆನು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

55. ಆಗ ಇನ್ಸ ಪೆಕ್ಟರ್ ರವರು ನಾವು ಇರುವುದೇ ದೂರು ತೆಗೆದುಕೊಳ್ಳಲು, ಸುಳ್ಳು ದೂರು ಕೊಟ್ಟರೂ ಸಹ ಅದನ್ನು ತನಿಖೆ ಮಾಡಿ ವರದಿ ಸಲ್ಲಿಸುತ್ತೇವೆ, ನೀವು ತಪ್ಪು ಮಾಡದೇ ಇದ್ದರೆ ನೀವು ಏಕೆ ತಲೆ ಕೆಡಿಸಿಕೊಳ್ಳುತ್ತೀರಾ ಹೋಗಿ ಎಂದು ಹೇಳಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನನಗೆ ಸದರಿ ವಿಚಾರ ನೆನಪಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

56. ಮದ್ದೂರು ಪೊಲೀಸ್ ಠಾಣೆಯ ಬಳಿಗೆ ನನ್ನೊಂದಿಗೆ ಬಂದಿದ್ದ ನನ್ನ ಚಿಕ್ಕಪ್ಪನ ಮಕ್ಕಳು ತಾವು ಕ್ರಿಸ್ ಮಸ್ ಊಟಕ್ಕೆ ಹೋಗಿ ಬರುತ್ತೇವೆ ಎಂದು ಹೇಳಿ ನನ್ನನ್ನು ಕಳುಹಿಸಿದರು, ನಾನು ನೇರವಾಗಿ ನಮ್ಮ

ತೋಟದ ಮನೆಗೆ ಹೋದೆನು, ನಮ್ಮ ತೋಟದ ಮನೆಯಲ್ಲಿ ನನ್ನ ತಂದೆ ಜಗದೀಶ ಹಾಗೂ ಶಿವ ಕುಮಾರ ಮಾತನಾಡುತ್ತಾ ಕುಳಿತಿದ್ದರು, ನನ್ನ ತಂದೆ ನನ್ನನ್ನು ನೋಡಿ ನೀನು ಏಕೆ ಬಂದೆ, ಊರಿನ ವಿಚಾರವನ್ನು ನಾನು ನೋಡಿಕೊಳ್ಳುತ್ತೇನೆ ನೀನು ಬೆಂಗಳೂರಿಗೆ ಹೋಗು ಎಂದು ನನಗೆ ಹೇಳಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

57. ಪ್ರಸನ್ನನಿಗೆ ಹೊಡೆದಿದ್ದನ್ನು ನೀವು ಕೇಳುವುದಿಲ್ಲವಾ ಎಂದು ನಾನು ನನ್ನ ತಂದೆಯನ್ನು ಕೇಳಿದೆನು, ನಾನು ಬೆಳಗ್ಗೆಯಿಂದಲೂ ಊರಿನ ಮುಖಂಡರೊಂದಿಗೆ ಮಾತನಾಡಿದ್ದೇನೆ, ಪಂಚಾಯತಿ ಸೇರಿಸುತ್ತೇನೆ ನೀನು ಬೆಂಗಳೂರಿಗೆ ಹೋಗು ಎಂದು ನನ್ನ ತಂದೆ ನನಗೆ ಹೇಳಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

58. ನಾವು ನಮ್ಮ ಮನೆಯ ಕಡೆ ಹೋಗುವಾಗ ಅರಳಿಕಟ್ಟೆಯ ಬಳಿ ಆರೋಪಿಗಳಾದ ಹೊನ್ನಯ್ಯ, ಮಹೇಂದ್ರ, ಕೋಟಿ ಮುತ್ತುರಾಜು, ಕೆಂಗಲ್ ಗೌಡ ಸೇರಿ ಇತರೆ ಆರೋಪಿಗಳು ನಮ್ಮನ್ನು ಅಡ್ಡ ಹಾಕಿದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿಗಳು ನಮ್ಮನ್ನು ಅಡ್ಡ ಹಾಕಿದರು ಎಂದು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

59. ಆರೋಪಿಗಳಾದ ಹೊನ್ನಯ್ಯ ಹಾಗೂ ಮಹೇಂದ್ರ ನಮ್ಮನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆಗ ಆರೋಪಿ ಹೊನ್ನಯ್ಯ ಮಚ್ಚು ತೋರಿಸಿ ಏ ಶಿವ ಎಲ್ಲರನ್ನೂ ಕರೆದುಕೊಂಡು ಹೊರಟುಹೋಗು ಎಂದು ಹೆಳಿದನು ಎನ್ನುವುದು ಸುಳ್ಳು

ಎಂದರೆ ಸರಿಯಲ್ಲ. ಆರೋಪಿ ಹೊನ್ನಯ್ಯನ ಕೈಯಲ್ಲಿ ಮಚ್ಚು ಅಥವಾ ಯಾವುದೇ ಆಯುಧ ಇರಲಿಲ್ಲವಾದರೂ ಸಹ ನಾನು ಆ ಬಗ್ಗೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

60. ಆಗ ಅರೋಪಿ ಮಹೇಂದ್ರ ಶಂಕರಣ್ಣನ ಮಗ ಮುತ್ತುವಿನ ಹತ್ತಿರ ಏನು ಗಲಾಟೆ ಮಾಡಲು ಹೋಗಿದ್ದೀರಾ, ನಮ್ಮ ಹತ್ತಿರ ನಿಮ್ಮ ಪೌರುಷ ತೋರಿಸಿ ಎಂದು ಹೇಳಿದನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿರುತ್ತೇನೆ.

61. ಆಗ ನನ್ನ ತಮ್ಮ ಯೋಗರಾಜು ನಾವು ಶಂಕರಣ್ಣನ ಮಗ ಮುತ್ತುವಿಗೆ ಹೊಡೆದಿಲ್ಲ, ಬಡೆದಿಲ್ಲ ಆದರೆ ಪ್ರಸನ್ನನಿಗೆ ಏಕೆ ಹೊಡೆದಿದ್ದು ಎಂದು ಕೇಳಲು ಹೋಗಿದ್ದೆವು, ಇದನ್ನೆಲ್ಲಾ ಕೇಳಲು ನೀವು ಯಾರು, ನಿಮಗೂ ಇದಕ್ಕೂ ಏನು ಸಂಬಂದ ಎಂದು ಎಂದು ಕೇಳಿದನು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿರುತ್ತೇನೆ. ಪೊಲೀಸರ ಮುಂದೆ ನಾನು ಸದರಿ ವಿಚಾರವನ್ನು ಹೇಳಿಲ್ಲ ಎಂದರೆ ಸರಿಯಲ್ಲ.

62. ಆಗ ಮಹೇಂದ್ರನು ಸದರಿ ಶಂಕರಣ್ಣನ ಮಗ ಮುತ್ತು ನನ್ನ ಸ್ನೇಹಿತನ ಅಣ್ಣನ ಮಗ, ನಾನು ಯಾಕೆ ಕೇಳಬಾರದು ಎಂದು ಕೇಳಿದನು. ಆಗ ಯೋಗರಾಜು ನಿಮ್ಮ ಸ್ನೇಹಿತನ ಅಣ್ಣನ ಮಗನ ವಿಚಾರವನ್ನು ನೀವು ಕೇಳಬಹುದು, ನಮ್ಮ ಅಣ್ಣನಿಗೆ ಹೊಡೆದ ವಿಚಾರವನ್ನು ನಾವು ಕೇಳಬಾರದ ಎಂದು ಕೇಳಿದನು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿರುತ್ತೇನೆ. ಪೊಲೀಸರ ಮುಂದೆ ನಾನು ಸದರಿ ವಿಚಾರವನ್ನು ಹೇಳಿಲ್ಲ ಎಂದರೆ ಸರಿಯಲ್ಲ.

63. ನಾನು ಆಗ ಅರೋಪಿಗಳಾದ ಮಹೇಂದ್ರ ಹಾಗೂ ಕೆಂಗಲ್ ಗೌಡ ರವರಿಗೆ ನೀವು ಊರಿನ ಮುಖಂಡರು ಬುದ್ದಿವಾದ ಹೇಳಬೇಕಾದವರು, ನೀವು ಪುಟ್ಟಲಿಂಗಮ್ಮನನ್ನು ಪುಸಲಾಯಿಸಿ ಸುಳ್ಳು ದೂರು ಕೊಡಿಸಲು ಹೊಗಿದ್ದೀರಲ್ಲಾ , ನೀವೆ ಬುದ್ದಿಮಾತು ಹೇಳಿ ರಾಜಿ ಮಾಡಿಸಬಹುದಾಗಿತ್ತು ಎಂದು ಕೇಳಿದೆನು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆನೆ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

64. ಆಗ ಆರೋಪಿ ಮಹೇಂದ್ರ ಬೆರಳು ತೋರಿಸಿ, ನೀನು ನಿನಗೆ ಉಪದೇಶ ಹೇಳಲು ಬರಬೇಡ, ಮರ್ಯಾದೆಯಿಂದ ಎಲ್ಲರನ್ನೂ ಕರೆದುಕೊಂಡು ಹೊರಟು ಹೋಗು ಇಲ್ಲವಾದರೆ ನಿಮ್ಮನ್ನು ಮತ್ತೇ ಊರಿನ ಒಳಗಡೆ ಬಾರದ ಹಾಗೆ ಮಾಡುತ್ತೇವೆ ಎಂದು ಹೇಳಿದನು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ನಾನು ಹೇಳಿದ್ದೇನೆ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಹೇಂದ್ರ ನಾನು ಹೇಳಿದಂತೆ ಹೇಳಿಲ್ಲ ಎಂದರೆ ಸರಿಯಲ್ಲ.

65. ಆಗ ನಾನು, ನನ್ನನ್ನು ಊರಿನಿಂದ ಆಚೆ ಹೋಗು ಎಂದು ಹೇಳಲು ನೀವು ಯಾರು, ನಾನು ಊರಿನಲ್ಲಿ ಇರುತ್ತೇನೆ ಎಂದು ಅರೋಪಿ ಮಹೇಂದ್ರನನ್ನು ಕುರಿತು ಹೇಳಿದೆನು, ಆಗ ಅರೋಪಿ ಮಹೇಂದ್ರ ಅಲ್ಲಿದ್ದವರಿಗೆ ಇವರು ಬಾಯಿ ಮಾತಿಗೆ ಬಗಲ್ಲ, ಎಲ್ಲರೂ ಎತ್ತಿಕೊಳ್ಳಿರೋ ಎಂದು ಹೇಳಿದರು, ಆಗ ಶೆಡ್ಡು ಅಲಿಯಾಸ್ ಮುತ್ತುರಾಜು ಓಡಿಹೋಗಿ ಅರಳಿಮರದ ಕಟ್ಟೆಯ ಬಳಿ ನಿಂತಿದ್ದ ಬುಲೇರೋ ವಾಹನದಿಂದ ದೊಣ್ಣೆಗಳನ್ನು ತೆಗೆದು ಕೆಳಗೆ ಹಾಕಿದನು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಹೇಂದ್ರ ನಾನು ಹೇಳಿದಂತೆ ಹೇಳಿಲ್ಲ ಎಂದರೆ ಸರಿಯಲ್ಲ. ಬುಲೆರೋ ವಾಹನದಲ್ಲಿ ಯಾವುದೇ ದೊಣ್ಣೆಗಳು ಇರಲಿಲ್ಲ ಹಾಗೂ ಶೆಡ್ಡು ಅಲಿಯಾಸ್ ಮುತ್ತುರಾಜು ಓಡಿಹೋಗಿ ಅರಳಿಮರದ ಕಟ್ಟೆಯ ಬಳಿ ನಿಂತಿದ್ದ ಬುಲೇರೋ ವಾಹನದಿಂದ ದೊಣ್ಣೆಗಳನ್ನು ತೆಗೆದು ಕೆಳಗೆ ಹಾಕಿಲ್ಲ ಎಂದರೆ ಸರಿಯಲ್ಲ. ಸದರಿ ಬುಲೇರೋ ವಾಹನದ ನೊಂದಾವಣೆ ಸಂಖ್ಯೆಯನ್ನು ನಾನು ಹೇಳಲಾರೆ. ಅಲ್ಲಿ ನಿಂತಿದ್ದ ಅರೋಪಿಗಳು ಎಲ್ಲರೂ ಒಂದೊಂದು ದೊಣ್ಣೆಗಳನ್ನು ಎತ್ತಿಕೊಂಡು ನನ್ನ ಕಡೆ ಬಂದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ಹಾಗೂ ಎಸ್. ಸಿ. 82/2017 ರ ಆರೋಪಿಗಳು ಸೇರಿ ಮತ್ತುರಾಜು ಹಾಗೂ ನಂದೀಶನ ಮೇಲೆ ದಾಳಿ ಮಾಡಲು ಪ್ರಾರಂಬಿಸಿದೆವು ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮೇಲೆ ಯಾವುದೇ ಗಲಾಟೆ ಮಾಡಿಲ್ಲ ಹಾಗೂ ನಾನೇ ಆರೋಪಿಗಳ ಮೇಲೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಮತ್ತುರಾಜು ಹಾಗೂ ನಂದೀಶ ನನ್ನ ಮತ್ತು ಎಸ್. ಸಿ. 82/2017 ರ ಆರೋಪಿಗಳ ಹಲ್ಲೆಯಿಂದಾಗಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಎಸ್. ಸಿ. 82/2017 ರಲ್ಲಿ ಈ ಕೇಸಿನ

1 ನೇ ಆರೋಪಿ ದೂರುದಾರರಾಗಿದ್ದು, ಆತ ನಮ್ಮ ವಿರುದ್ದ ಸಾಕ್ಷ್ಯ ಹೇಳಬಾರದೆಂದು ಆತನನ್ನು ಹೆದರಿಸಲು ಈ ಪ್ರಕರಣದ ಆರೋಪಿಗಳ ವಿರುದ್ದ ಸುಳ್ಳು ಆರೋಪ ಹೊರೆಸಿದ್ದೇವೆ ಎಂದರೆ ಸರಿಯಲ್ಲ.

66. ಆಗ ಅರೋಪಿ ಹೊನ್ನಯ್ಯ ಬಂದು ನನ್ನ ಶರಟಿನ ಪಟ್ಟಿಯನ್ನು ಹಿಡಿದುಕೊಂಡು ಸೂಳೆ ಮಗನೇ ನನ್ನ ಅಣ್ಣನ ವಿರುದ್ದ ಮಾತನಾಡುತ್ತೀಯಾ ಎಂದು ಹೇಳಿ ತನ್ನ ಕೈಯಲ್ಲಿದ್ದ ಮಚ್ಚಿನಿಂದ ನನಗೆ ಹೊಡೆಯಲು ಬಂದಾಗ ನಾನು ಸದರಿ ಅರೋಪಿಯ ಕೈಯನ್ನು ಹಿಡಿದುಕೊಳ್ಳಲು ಹೋದಾಗ ನನ್ನ ಹಿಂದೆ ಇದ್ದ ಹೇಮಂತ ನನ್ನನ್ನು ಹಿಡಿದು ಹಿಂದಕ್ಕೆ ಎಳೆದೆನು, ಆಗ ಮಚ್ಚಿನ ಏಟು ನನ್ನ ಹಣೆಯ ಮುಂಭಾಗಕ್ಕೆ ಬಿದ್ದು ಗಾಯವಾಗಿ ರಕ್ತ ಬಂದಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಹೊನ್ನಯ್ಯ ನನ್ನನ್ನು ಯಾವುದೇ ರೀತಿ ಬೈದಿಲ್ಲ ಹಾಗೂ ಹೊಡೆಯಲು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಎಸ್. ಸಿ. 82/2017 ರಲ್ಲಿನ ಇತರೆ ಆರೋಪಿಗಳು ದಾಳಿ ಮಾಡಿದ್ದರಿಂದ ಸದರಿ ಹೊನ್ನಯ್ಯ 15 ದಿನಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ಮರಣ ಹೊಂದಿದ್ದ ತನ್ನ ಅಣ್ಣ ಮುತ್ತುರಾಜುವಿನ ಶವ ಸಂಸ್ಕಾರಕ್ಕೂ ಸದರಿ ಹೊನ್ನಯ್ಯ ಬರಲು ಆಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

67. ನನಗೆ ಯಾವುದೇ ರೀತಿಯ ರಕ್ತಗಾಯ ಆಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳೊಂದಿಗ ಗಲಾಟೆ ಮಾಡುವಾಗ ಆದ ನೂಕುನುಗ್ಗಲಲ್ಲಿ ನನಗೆ ಸಣ್ಣಪುಟ್ಟ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ಆಗ ಅರೋಪಿ ಮಹೇಂದ್ರ ಚೂರಿಯನ್ನು ತೆಗೆದುಕೊಂಡು ನನಗೆ ಚುಚ್ಚಲು ಬಂದನು, ಸದರಿ ಏಟು ನನ್ನನ್ನು ತಬ್ಬಿಕೊಂಡಿದ್ದ ಹೇಮಂತನ ಕೈಗೆ ಬಿದ್ದಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಮಹೇಂದ್ರನ ಕೈಯಲ್ಲಿ ಯಾವುದೇ ಚೂರಿ ಇರಲಿಲ್ಲ ಹಾಗೂ ಆತ ನನಗೆ ಚುಚ್ಚಲು ಬರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಹೊನ್ನಯ್ಯ ಎಸ್. ಸಿ. 82/2017 ದೂರದಾರರಾಗಿರುವುದರಿಂದ ಆತನ ವಿರುದ್ದ ಸುಳ್ಳು ಆರೋಪ ಹೊರೆಸಿರುತ್ತೇನೆ ಎಂದರೆ ಸರಿಯಲ್ಲ.

68. ಅರೋಪಿ ಶೆಡ್ಡು ಅಲಿಯಾಸ್ ಮುತ್ತುರಾಜು ಅದೇ ಸಮಯಕ್ಕೆ ರಾಡನ್ನು ತೆಗೆದುಕೂಂಡು ಬಂದು ನನ್ನ ತಲೆಯ ಮೇಲೆ ಹೊಡೆದನು, ಆಗ ಅರೋಪಿ ಬಿಡಬೇಡಿ ಈ ನನ್ನ ಮಕ್ಕಳನ್ನು ಹೊಡೆದು ಸಾಯಿಸಿ ಎಂದು ಕೂಗುತ್ತಿದ್ದನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅರೋಪಿ ಶೆಡ್ಡು ಅಲಿಯಾಸ್ ಮುತ್ತುರಾಜು ಕೈಯಲ್ಲಿ ಯಾವುದೇ ಆಯುಧ ಇರಲಿಲ್ಲ ಹಾಗೂ ಆತ ನನಗ ಹೊಡೆಯಲು ಬರಲಿಲ್ಲ ಎಂದರೆ ಸರಿಯಲ್ಲ. ಆಗ ಅರೋಪಿ ಪುಟ್ಟರಾಮು, ಮಹದೇವ, ಕುಮಾರ ಹಾಗೂ ಇತರರು ದೊಣ್ಣೆಯನ್ನು ತೆಗೆದುಕೊಂಡು ಬಂದು ನನ್ನ ತಲೆಯ ಮೇಲೆ ಹೊಡೆದರು, ನನ್ನ ತಲೆಗೆ ಗಾಯವಾಗಿ ರಕ್ತ ಬರಲು ಪ್ರಾರಂಭವಾಯಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಎಸ್ ೦ಸಿ 82/2017 ರಲ್ಲಿ ಸದರಿ

ಮಹದೇವ ಸಾಕ್ಷಿಯಾಗಿರುವುದರಿಂದ ಅತನ ಮೇಲೆ ಸುಳ್ಳು ಆರೋಪ ಹೊರೆಸಿದ್ದೇನೆ ಎಂದರೆ ಸರಿಯಲ್ಲ.

69. ಹೇಮಂತ ನನ್ನನ್ನು ಎಳೆದುಕೊಂಡು ಹೋಗಿ ನನ್ನನ್ನು ಬೈಕಿನ ಮೇಲೆ ಕೂರಿಸಿಕೊಂಡನು. ಶಿವರಾಜು ಬೈಕನ್ನು ಚಲಾಯಿಸುತ್ತಿದ್ದು ಹೇಮಂತ ನನ್ನನ್ನು ಹಿಡಿದುಕೊಡು ನನ್ನ ಹಿಂದೆ ಬೈಕಿನಲ್ಲಿ ಕುಳಿತಿದ್ದನು. ಆಗ ಅರೋಪಿ ಸಿಂಧುಕುಮಾರ ಕುಡುಗೋಲು ತೆಗದುಕೊಂಡು ನನಗೆ ಹೊಡೆಯಲು ಬಂದನು, ಆದರೆ ಸದರಿ ಏಟು ನನ್ನ ಹಿಂದೆ ಕುಳಿತಿದ್ದ ಹೇಮಂತನ ತಲೆಗೆ ಬಿದ್ದಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅರೋಪಿ ಸಿಂಧುಕುಮಾರನ ಕೈಯಲ್ಲಿ ಕುಡುಗೋಲು ಇರಲಿಲ್ಲ ಹಾಗೂ ಅತನು ನನ್ನ ಮೇಲೆ ದಾಳಿ ಮಾಡಲು ಬರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ಹೇೀಳಿದ್ದೇನೋ ಇಲ್ಲವೋ ನೆನಪಿಲ್ಲ.

70. ನಾನು ಚಿಕ್ಕಬೋರೆಗೌಡ ಎನ್ನುವ ವೈದ್ಯರ ಮುಂದೆ ನನಗೆ ಹಲ್ಲೆಯಾಗಿದ್ದರಿಂದ ಗಾಯವಾಗಿದೆ ಎಂದು ಮದ್ದೂರು ಆಸ್ಪತ್ರೆಯಲ್ಲಿ ಹೇಳಿರುತ್ತೇನೆ. ಆದಿನ ನಾನು ಮದ್ದೂರು ಆಸ್ಪತ್ರೆಗೆ ಹೋದಾಗ ಸಮಯ ಸಂಜೆ 7.00 ರಿಂದ 7.15 ಆಗಿತ್ತು. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ವೈದ್ಯರ ಮುಂದೆ ನಾನು ಹಲ್ಲೆಯಿಂದ ನನಗೆ ಗಾಯವಾದ ವಿಚಾರವನ್ನು ಹೇಳಿರುತ್ತೇನೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

71. ವೈದ್ಯರು ನನಗೆ ಮುಖ ತೊಳೆದುಕೋ ಎಂದು ಹೇಳಿದಾಗ ನಾನು ಮುಖ ತೊಳೆದುಕೊಳ್ಳಲು ಹೋದಾಗ ಆಸ್ಪತ್ರೆಯ ಕಿಟಕಿಯಿಂದ ಅರೋಪಿಗಳಾದ ಮಹೇಂದ್ರ, ಪುಟ್ಟರಾಮು, ಮಹದೇವ, ಶೆಡ್ಡು ಅಲಿಯಾಸ್ ಮುತ್ತು ಇವರುಗಳು ಪ್ಲಾಸ್ಟಿಕ್ ಪೈಪಿನಿಂದ ಕಿಟಕಿಯ ಮೂಲಕ ನನಗೆ ಚುಚ್ಚಿದರು ಎಂದು ನಾನು ಪೊಲಿಸರ ಮುಂದೆ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ, ಆದರೆ ಅವರು ಕಿಟಕಿಯಿಂದ ಚುಚ್ಚಿದರು ಎಂದು ಮಾತ್ರ ಬರೆದಿರುತ್ತಾರೆ ಎಂದು ನುಡಿದಿದ್ದಾರೆ. ಚಿಕ್ಕಬೋರೆಗೌಡ ಎನ್ನುವ ವೈದ್ಯರು ನನಗೆ ಮುಖ ತೊಳೆದುಕೊಳ್ಳಿ ಎಂದು ಆ ದಿನ ಹೇಳಿದರು.

72. ನಾನು ಹೆದರಿಕೊಂಡು ಆಸ್ಪತ್ರೆಯಿಂದ ಓಡಿಹೋಗುತ್ತಿದಾಗ ಹೊರಗಿನಿಂದ ಬರುತ್ತಿದ್ದ ಇನ್ಸ್ ಪೆಕ್ಟರ್ ಮೋಹನ್ ಪಾಟೀಲ್ ರವರು ನನ್ನನ್ನು ಆಸ್ಪತ್ರೆಯ ಒಳಗೆ ಕರೆದುಕೊಂಡು ಹೋಗಿ ವೈದ್ಯರ ಪಕ್ಕದ ಕೊಠಡಿ ಒಳಗೆ ಕೂಡಿ ಹಾಕಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ

ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿರುತ್ತೇನೆ. ಸದರಿ ರೂಮು ಆಸ್ಪತ್ರೆಯ ಯಾವ ದಿಕ್ಕಿನಲ್ಲಿದೆ ಎಂದು ನಾನು ಹೇಳಬಲ್ಲೆ. ಸದರಿ ರೂಮಿನ ಬಾಗಿಲು ಪಶ್ಚಿಮ ದಿಕ್ಕಿಗೆ ಇದೆ.

73. ಸದರಿ ಕೊಠಡಿಯಲ್ಲಿ ನನ್ನೊಂದಿಗೆ ಇಬ್ಬರು ಪೋಲಿಸರು ಇದ್ದರು. ನಾನು ಸದರಿ ಕೊಠಡಿಯಲ್ಲಿ ಕುಳಿತಿದ್ದಾಗ ಮೇಲ್ಕಂಡ ಆರೋಪಿಗಳು ಅಲ್ಲಿಗೂ ಬಂದು ಸದರಿ ಕೊಠಡಿಯ ಕಿಟಕಿಯ ಗಾಜುಗಳನ್ನು ಗುದ್ದಿ ಒಡೆದು ಹಾಕಿದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿರುತ್ತೇನೆ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಕಿಟಕಿ ಗಾಜು ಒಡೆದು ಹಾಕಿದ ಬಗ್ಗೆ ಆರೋಪಿಗಳ ವಿರುದ್ದ ಯಾವುದಾದರೂ ಪ್ರಕರಣ ದಾಖಲಾದ ವಿಚಾರ ನನಗೆ ಗೊತ್ತಿಲ್ಲ. ಆರೋಪಿಗಳು ಕಿಟಕಿ ಗಾಜು ಒಡೆದು ಹಾಕಿಲ್ಲವಾದರೂ ಸಹ ನಾನು ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

74. ಇದನ್ನು ಎಲ್ಲಾ ಸದರಿ ಮೋಹನ್ ಪಾಟೀಲ್ ಎನ್ನುವ ಇನ್ಸ್ ಪೆಕ್ಟರ್ ರವರು ತಮ್ಮ ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಳ್ಳುತ್ತಿದ್ದುದನ್ನು ನೋಡಿ ಸದರಿ ಆರೋಪಿಗಳು ಅಲ್ಲಿಂದ ಓಡಿಹೋದರು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೇನೆ ಎಂದು ನುಡಿದಿದ್ದಾರೆ. ಪೊಲಿಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

75. ನಂತರ ಸದರಿ ಕೊಠಡಿಯಲ್ಲಿದ್ದ ಪೊಲೀಸರು ನನ್ನನ್ನು ವಿಚಾರಿಸಿದಾಗ ನಾನು ದೂರು ಕೊಡುತ್ತೇನೆಂದು ಹೇಳಿದ್ದರಿಂದ ನನಗೆ ಅವರು ಕೊಟ್ಟ ಬಿಳಿ ಹಾಳೆಯಲ್ಲಿ ನಾನು ದೂರನ್ನು ಬರೆದಿರುತ್ತೇನೆ. ಆ ಸಮಯದಲ್ಲಿ ನನಗೆ ರಕ್ತ ಬರುತ್ತಿದ್ದು, ಆರೋಪಿಗಳು ಆಸ್ಪತ್ರೆಯ ಬಳಿಯೂ ಬಂದು ಗಲಾಟೆ ಮಾಡಿದ್ದರಿಂದ ನಾನು ಗಾಬರಿಯಲ್ಲಿದ್ದೆನು ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಸಂಕ್ಷಿಪ್ತವಾಗಿ ಬರೆದುಕೊಂಡಿದ್ದು ವಿವರವಾಗಿ ಬರೆದುಕೊಂಡಿರುವುದಿಲ್ಲ ಎಂದು ನುಡಿದಿದ್ದಾರೆ. ಪೊಲೀಸರ ಮುಂದೆ ನಾನು ಆ ರೀತಿ ಹೇಳಿಕೆಯನ್ನು ಕೊಟ್ಟಿಲ್ಲವಾದರೂ ಸಹ ಸದರಿ ವಿಚಾರವನ್ನು ಈಗ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಕೊಠಡಿಯಲ್ಲಿದ್ದ ಪೊಲಿಸರ ಪೈಕಿ ಒಬ್ಬರ ಹೆಸರು ಶಿವಕುಮಾರ ಆಗಿದ್ದು, ಇನ್ನು ಒಬ್ಬರ ಹೆಸರು ನನಗೆ ನೆನಪಿಲ್ಲ.

76. ಸದರಿ ದೂರನ್ನು ನಾನು ಆಸ್ಪತ್ರೆಯಲ್ಲಿ ನನ್ನ ಜೊತೆಯಲ್ಲಿದ್ದ ಪೋಲಿಸ್ ಶಿವ ಕುಮಾರ್ ರವರ ಕೈಗೆ ಕೊಟ್ಟಿರುತ್ತೇನೆ. ಸದರಿ ಶಿವ ಕುಮಾರ್ ರವರ ಹುದ್ದೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 27.12.2016 ರಂದು ನಾನು ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿಃ 25.12.2016 ರಂದು ನಾವು ಹಲ್ಲೆ ಮಾಡಿದ ಮುತ್ತುರಾಜು ಹಾಗೂ ನಂದೀಶ ಮರಣ ಹೊಂದಿರುತ್ತಾರೆ ಎಂದು ಗೊತ್ತಾದ ನಂತರ ನಾವು ಆರೋಪಿಗಳ ವಿರುದ್ದ ಸುಳ್ಳು ಆರೋಪ ಹೊರೆಸಿ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ವಿಜಯ್ ಕುಮಾರ್ ರವರ ಕೈಗೆ ಆಸ್ಪತ್ರೆಯಲ್ಲಿದ್ದಾಗ ದೂರು ಕೊಟ್ಟಿದ್ದೆ ಎನ್ನುವುದು ಸುಳ್ಳು ಹಾಗೂ ಸದರಿ ವಿಚವರವನ್ನು ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮಗೆ ಯಾರಿಗೂ ಯಾವುದೇ ರೀತಿಯ ತೊಂದರೆ ಮಾಡಿಲ್ಲವಾದರೂ ಸಹ ಆರೋಪಿಗಳು ನಮ್ಮ ವಿರುದ್ದ ಸಾಕ್ಷ್ಯ ನುಡಿಯಬಾರದು ಎನ್ನುವ ಕಾರಣಕ್ಕಾಗಿ ಆರೋಪಿಗಳ ವಿರುದ್ದ ಸುಳ್ಳು ಆರೋಪ ಹೊರೆಸಿರುತ್ತೇನೆ  ಎಂದರೆ ಸರಿಯಲ್ಲ.

ಪಾಟೀಸವಾಲು ಉಳಿದ ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.